

ಆರಂಭಿಸಿದರು" ಎನ್ನುವ ಜರ್ದಾರಿ, ಸ್ಥಳೀಯರ ಮನಸ್ಸಿನಲ್ಲಿ ಕಾಡು ಕಡಿಯುವ ಬಗ್ಗೆ ಪಾಪಪ್ರಜ್ಞೆ ಮೂಡಿಸಿದ್ದೇ ತಮ್ಮ ತಂಡದ ಹೆಗ್ಗಳಿಕೆ ಎನ್ನುತ್ತಾರೆ.

## 'ಚಿಪ್ಕೋ' ಸೃಷ್ಟಿ

ಹಿಮಾಲಯ ತಪ್ಪಲಿನ ಕುಮಾವ್ ಹಾಗೂ ಘಡವಾಲ್ ಪ್ರಾಂತ್ಯದಿಂದ 'ಚಿಪ್ಕೋ ಆಂದೋಲನ' ತುಸು ಪ್ರಬಲವಾಗಿಯೇ ಚಾಲನೆ ಪಡೆಯಿತು. ವಾಸ್ತವವಾಗಿ, 'ಚಿಪ್ಕೋ' ಪದವನ್ನು ಟಂಕಿಸಿದ್ದು ಚಿಂತಕ, ಕವಿ ಹಾಗೂ ಪರಿಸರ ಹೋರಾಟಗಾರ ಘನಶ್ಯಾಮ್ ಸೈಲಾನಿ.

ಆ ಘಟನೆಯನ್ನು ಜರ್ದಾರಿ ವಿವರಿಸುತ್ತಾರೆ: "1972ರಲ್ಲಿ ಜಂಗಲ್ ಬಚಾವೋ ಆಂದೋಲನ ಕ್ರಮೇಣ ಬಲಗೊಳ್ಳುತ್ತಿತ್ತು. ಕವಿ ಘನಶ್ಯಾಮ್ ಸೈಲಾನಿ, ಸುಂದರಲಾಲ್ ಬಹುಗುಣ, ಗೌರಾದೇವಿ ಹಾಗೂ ಚಂಡಿಪ್ರಸಾದ್ ಭಟ್ ಸೇರಿಕೊಂಡು, ಉತ್ತರಕಾಶಿಯಿಂದ ಡಿಸೆಂಬರ್ 12ರಂದು ಪಾದಯಾತ್ರೆ ಶುರು ಮಾಡಿದರು. ದಾರಿ ಮಧ್ಯೆ ರುದ್ರಪ್ರಯಾಗದ ಗಾಂಧಿ ಆಶ್ರಮದಲ್ಲಿ ತಂಗಿದ್ದರು. ಆ ಸಂಜೆ ಅವರೆಲ್ಲ ಮಾತನಾಡುತ್ತ ಕೂತಿದ್ದಾಗ, ಘನಶ್ಯಾಮ ಸೈಲಾನಿ ಕವಿತೆ ಬರೆದರು. ಅದು ಹೀಗಿತ್ತು:

ಎಲ್ಲರೂ ಒಗ್ಗಟ್ಟಾಗಿ ಮುನ್ನುಗ್ಗೋಣ, ಬನ್ನಿ
ಸರ್ಕಾರಿ ನೀತಿಗಳಿಂದ ಕಾಡನ್ನು ಕಡಿಯಲಾಗುತ್ತಿದೆ
ಹೊರಗಿನಿಂದ ಬಂದವರು ಅರಣ್ಯ ನಾಶ ಮಾಡುತ್ತಿದ್ದಾರೆ
ಇದಕ್ಕಾಗಿ ಹೋರಾಟ ರೂಪುಗೊಳ್ಳಬೇಕಿದೆ
ಬನ್ನಿ ನಾವು ಗಿಡವನ್ನು ಅಪ್ಪಿಕೊಳ್ಳೋಣ
ಅರಣ್ಯ ಸಂಪತ್ತನ್ನು ಉಳಿಸಿಕೊಳ್ಳೋಣ ||

ಈ ಕವನದಲ್ಲಿ 'ಅಪ್ಪಿಕೊಳ್ಳೋಣ' ಎಂಬುದರ ಘಡವಾಲಿ ಪದವೇ 'ಚಿಪ್ಕೋ'. ಮರ ಅಪ್ಪಿಕೊಳ್ಳುವ ರೂಪಕವೇ ಚಿಪ್ಕೋ ಚಳವಳಿಯ ಭಾವವೂ ಆಯಿತು. ಆ ಪದವನ್ನು ಬಹುವಾಗಿ ಮೆಚ್ಚಿಕೊಂಡ ಬಹುಗುಣ, ತಮ್ಮ ಮಾತುಗಳಲ್ಲಿ 'ವನ ಬಚಾವೋ' ಬದಲಿಗೆ 'ಚಿಪ್ಕೋ' ಪದ ಬಳಸಿದರು. ಅದೇ ಚಳವಳಿಯ ಕಾಯಂ ಹೆಸರಾಗಿ ಉಳಿದುಕೊಂಡಿತು.

ಉತ್ತರಾಖಂಡದ ಚಮೋಲಿಯಲ್ಲೂ ಆಂದೋಲನ ತೀವ್ರ ಸ್ವರೂಪ ಪಡೆಯಿತು. ಬಹುಗುಣ ಅಲ್ಲೆಲ್ಲ ಹೋಗಿ ದಿನಗಟ್ಟಲೇ ಸತ್ಯಾಗ್ರಹ ನಡೆಸಿ, ಅರಣ್ಯ ನಾಶದ ವಿರುದ್ಧ ಜನರನ್ನು ಎಚ್ಚರಗೊಳಿಸಿದರು. 1973ರಲ್ಲಿ ರೇಣಿ ಜಂಗಲ್ ಪ್ರದೇಶದ ಜೋಶಿಮಠ ಸಮೀಪದಲ್ಲಿ 'ಕಾಡು ನಮ್ಮ ತವರುನೆಲ, ಇದೇ ನಮ್ಮ ತಾಯಿ ಮನೆ' ಎಂಬ ಚಳವಳಿಯನ್ನು ಮಹಿಳೆಯರೇ ಶುರು ಮಾಡಿದರು. ಬಹುಗುಣ ಅಲ್ಲಿಗೆ ಹೋಗಿ, ಜನರಲ್ಲಿ ಆತ್ಮವಿಶ್ವಾಸ ತುಂಬಿದರು. ಅಲ್ಲೊಂದು ಕಂಪನಿ (ಸೈಮಂಡ್) ಮರಗಳನ್ನು ಕತ್ತರಿಸಿ, ಕ್ರೀಡಾ ಸಾಮಗ್ರಿಗಳನ್ನು ತಯಾರಿಸಲು ಲಖನೌ ಕಂಪನಿಗೆ ಪೂರೈಸುತ್ತಿತ್ತು. ಸತ್ಯಾಗ್ರಹ ಶುರು ಮಾಡಿದ ಜನರು 'ಈ ಕಾಡಿನಿಂದ ಹಲವು ಉಪಯೋಗವಿದೆ. ದನಕರುಗಳಿಗೆ ಮೇವು, ಉರುವಲಿಗೆ ಕಟ್ಟಿಗೆ ಸಿಗುತ್ತಿದೆ. ಬೆಳೆಗೆ ಮಳೆಯೂ ಇಲ್ಲಿಂದಲೇ ಆಗುತ್ತದೆ. ಆದರೆ ಯಾರದೋ ಮನರಂಜನೆಗಾಗಿ ನಮ್ಮಲ್ಲಿನ ಕಾಡನ್ನು ಕಡಿಯುವುದು ಯಾಕೆ' ಎಂದು ಪ್ರಶ್ನಿಸಿದರು.

"1976ರ ಒಂದು ಘಟನೆ ಪ್ರತಿಭಟನೆಯ ಸಾಧ್ಯತೆಯನ್ನು ವಿಸ್ತರಿಸಿತು. ಇದೇ ರಾಜ್ಯದ ತವಾ ಘಾಟ್‌ನಲ್ಲಿ ಪ್ರಬಲ ಭೂಕುಸಿತ ಸಂಭವಿಸಿ, 50ಕ್ಕೂ ಹೆಚ್ಚು ಜನ ಮೃತಪಟ್ಟರು. ಚಿಪ್ಕೋ ಆಂದೋಲನದ ನಾವೊಂದಷ್ಟು ಕಾರ್ಯಕರ್ತರು ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದಾಗ, ಹೆಚ್ಚು ಮರಗಳನ್ನು ಕತ್ತರಿಸಿದ ತಾಣದಲ್ಲಿ ಭೂಕುಸಿತ ಸಂಭವಿಸಿದ್ದುದು ಗೊತ್ತಾಯಿತು. 'ಚಿಪ್ಕೋ' ಆಂದೋಲನದ ಚಹರೆ ಹಾಗೂ ಪ್ರಾಮುಖ್ಯವನ್ನು ಇನ್ನಷ್ಟು ವಿಸ್ತರಿಸುವಲ್ಲಿ ಅದು ನೆರವಾಯಿತು" ಎನ್ನುತ್ತಾರೆ ಜರ್ದಾರಿ.

197778ರಲ್ಲಿ ತೆಹ್ರಿಯ ಅಡ್ವಾಣಿ ಗ್ರಾಮದಲ್ಲಿ ಬಹುಗುಣ ನೇತೃತ್ವದಲ್ಲಿ ಭಾರಿ ಪ್ರತಿಭಟನೆ ನಡೆಯಿತು. ಧೂಮ್‌ಸಿಂಗ್ ನೇಗಿ, ಉಮರ್, ಪ್ರಥಮ್, ಶಿಖರ್, ಓಂಕಾರದೇವಿ, ಬಚನಿ ದೇವಿ ಇತರರು ಬಹುಗುಣ ತಂಡದಲ್ಲಿ ಇದ್ದರು. ಪೊಲೀಸರು ಬಂದು ಬೆದರಿಕೆ ಹಾಕಿದರೂ ಜನರು ಹಿಂಜರಿಯಲಿಲ್ಲ.



ಸಭೆಯೊಂದರಲ್ಲಿ (ಎಡದಿಂದ ಬಲಕ್ಕೆ): ಧೂಮ್‌ಸಿಂಗ್ ನೇಗಿ, ಸುಂದರಲಾಲ್ ಬಹುಗುಣ, ಸೂರಜ್ ರಾಣಾ ಹಾಗೂ ವಿಜಯ್ ಜರ್ದಾರಿ